ಹೈಕೋರ್ಟ್ ಆದೇಶ | ಸಚಿವರಾಗಲು ಆರ್.ಶಂಕರ್, ಎಂಟಿಬಿಗೆ ಇಲ್ಲ ಅಡ್ಡಿ

# ಎಚ್. ವಿಶ್ವನಾಥ್ ಇನ್ನೂ ಅನರ್ಹ

▫ ವಿಕ ಸುದ್ದಿಲೋಕ ಬೆಂಗಳೂರು 1/12/20

ಸಚಿವರಾಗಬೇಕೆನ್ನುವ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆಸೆಗೆ ತೀವ್ರ ಹಿನ್ನಡೆಯಾಗಿದೆ. ಅವರು ಅನರ್ಹರಾಗಿಯೇ ಮುಂದುವರಿದಿದ್ದಾರೆ ಎಂದು ಹೈಕೋರ್ಟ್ ಮಧ್ಯಂತರ ಆದೇಶ



ನೀಡಿದೆ. ಆದರೆ, ಎಂಟಿಬಿ ನಾಗರಾಜ್ ಮತ್ತು ಆರ್.ಶಂಕರ್ ಚುನಾವಣೆಯಲ್ಲಿ ಮರು ಆಯ್ಕೆಯಾಗಿರುವುದರಿಂದ ಅವರು ಸಚಿವರಾಗಬಹುದು.

ಶಾಸಕ ಸ್ಥಾನದಿಂದ ಅನರ್ಹಗೊಂಡು ಪರಿಷತ್ ಸದಸ್ಯರಾಗಿರುವ ಎಂಟಿಬಿ ನಾಗರಾಜ್, ಆರ್. ಶಂಕರ್ ಹಾಗೂ ಎಚ್. ವಿಶ್ವನಾಥ್‌ಗೆ ಸಚಿವ ಸ್ಥಾನ ನೀಡದಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ವಕೀಲ ಎ.ಎಸ್. ಹರೀಶ್ ಕುಮಾರ್, ಎಸ್.ರುಕ್ಮಾಂಗದ ಮತ್ತು ಜಿ. ಮೋಹನ್‌ಕುಮಾರ್ ಸಲ್ಲಿಸಿದ್ದ ಪ್ರತ್ಯೇಕ ಪಿಐಎಲ್ ವಿಚಾರಣೆ ನಡೆಸಿದ್ದ ಸಿಜೆ ಎ.ಎಸ್. ಓಕ್ ನೇತೃತ್ವದ ವಿಭಾಗೀಯ ಪೀಠ ಸೋಮವಾರ ಈ ಮಧ್ಯಂತರ ಆದೇಶ ನೀಡಿತು.

ವಿಶ್ವನಾಥ್ ಸಚಿವ ಸ್ಥಾನ ಪಡೆಯಲು ಅನರ್ಹರು. ಅವರ ಹೆಸರನ್ನು ಸಚಿವ ಸ್ಥಾನಕ್ಕೆ ಶಿಫಾರಸು ಮಾಡುವಾಗ ಮುಖ್ಯಮಂತ್ರಿ ಈ ಅಂಶ ಪರಿಗಣಿಸಬೇಕು ಎಂದು ಆದೇಶಿಸಿದೆ. ಆದರೆ, ಎಂಟಿಬಿ ನಾಗರಾಜ್ ಮತ್ತು ಆರ್. ಶಂಕರ್ ವಿಧಾನಸಭೆ ಬೈಎಲೆಕ್ಷನ್‌ನಲ್ಲಿ ಸೋತರೂ, ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಮರು ಆಯ್ಕೆಯಾಗಿದ್ದಾರೆ. ಹಾಗಾಗಿ, ಅವರಿಗೆ ಸಚಿವ ಸ್ಥಾನ ನೀಡದಂತೆ ಅರ್ಜಿದಾರರು ಕೋರಿರುವ ಮನವಿ ಪರಿಗಣಿಸಲು ಬರುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

**ಕೋರ್ಟ್‌ನಲ್ಲಿ ಏನಿದೆ?:** ಶಾಸಕ ಸ್ಥಾನದಿಂದ ಅನರ್ಹಗೊಂಡವರು ವಿಧಾನಸಭೆ ಅಥವಾ ವಿಧಾನ ಪರಿಷತ್‌ನ ಯಾವುದಾದರೊಂದು ಸ್ಥಾನದ ಚುನಾವಣೆಗೆ ಸ್ಪರ್ಧಿಸಿ ಮರು ಆಯ್ಕೆಯಾಗುವವರೆಗೆ ಅನರ್ಹರಾಗಿಯೇ ಇರುತ್ತಾರೆ ಎಂದು ಸಂವಿಧಾನದ ಕಲಂ 164(1ಬಿ) ಹೇಳಿದೆ. ಹಾಗೆಯೇ, ಅನರ್ಹಗೊಂಡ ಶಾಸಕರು ಚುನಾವಣೆಗೆ ಸ್ಪರ್ಧಿಸಿ ಮರು ಆಯ್ಕೆಯಾಗುವವರೆಗೆ ಯಾವುದೇ ಸಂಬಳ ಬರುವ ರಾಜಕೀಯ ಹುದ್ದೆ ಹೊಂದುವಂತಿಲ್ಲ ಎಂದು ಕಲಂ 361 'ಬಿ' ಹೇಳಿದೆ. ವಿಶ್ವನಾಥ್ ಚುನಾವಣೆಗೆ ಸ್ಪರ್ಧಿಸಿ ಆಯ್ಕೆಯಾಗದೇ ರಾಜ್ಯಪಾಲರಿಂದ ನಾಮ ನಿರ್ದೇಶನಗೊಂಡಿದ್ದಾರೆ. ಹಾಗಾಗಿ, ಸಂವಿಧಾನದಡಿ ಸಚಿವರಾಗಲು ಅನರ್ಹರಾಗಿದ್ದಾರೆ. ಸಂವಿಧಾನದಡಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯಮಂತ್ರಿ, ಎಚ್. ವಿಶ್ವನಾಥ್ ಅವರನ್ನು ಸಚಿವ ಸ್ಥಾನಕ್ಕೆ ಶಿಫಾರಸು ಮಾಡುವ ಮುನ್ನ ಅನರ್ಹತೆ ಪರಿಗಣಿಸಬೇಕು. ಅವರ ಹೊರತಾಗಿಯೂ ಶಿಫಾರಸು ಮಾಡಿದರೆ ರಾಜ್ಯಪಾಲರು ಸಂವಿಧಾನದಡಿ ಅನರ್ಹತೆ ಗಮನಿಸಬೇಕು ಎಂದು ನ್ಯಾಯಾಲಯ ಹೇಳಿದೆ.

## ಕಲಂಗಳು ಏನು ಹೇಳುತ್ತವೆ?

### ಪರಿಚ್ಛೇದ 164(1ಬಿ)


ಯಾವುದೇ ಪಕ್ಷಕ್ಕೆ ಸೇರಿದ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯ ಅನರ್ಹತೆಗೆ ಒಳಗಾದರೆ, ಅನರ್ಹಗೊಂಡ ದಿನದಿಂದ ವಿಧಾನಸಭೆ ಅವಧಿ ಪೂರ್ಣಗೊಳ್ಳುವವರೆಗೆ ಅಥವಾ ಚುನಾವಣೆ ಎದುರಿಸಿ ವಿಧಾನಸಭೆ ಅಥವಾ ವಿಧಾನಪರಿಷತ್‌ಗೆ ಮರು ಆಯ್ಕೆಯಾಗುವರೆಗೂ ಸಚಿವ ಸ್ಥಾನ ಪಡೆಯಲು ಅವಕಾಶವಿರುವುದಿಲ್ಲ.

### ಪರಿಚ್ಛೇದ 361(ಬಿ)

ಯಾವುದೇ ಪಕ್ಷಕ್ಕೆ ಸೇರಿದ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯ ಅನರ್ಹಗೊಂಡರೆ, ಮರು ಆಯ್ಕೆಯಾಗುವವರೆಗೆ ಸಂಭಾವನೆ ಪಡೆಯುವಂಥ ರಾಜಕೀಯ ಹುದ್ದೆ ಹೊಂದಲು ಅವಕಾಶವಿಲ್ಲ. ಸಾರ್ವಜನಿಕರ ತೆರಿಗೆ ಹಣದಲ್ಲಿ ವೇತನ ಅಥವಾ ಸಂಭಾವನೆ ನೀಡುವಂತಹ ಹುದ್ದೆಗಳಿಗೆ ಅವರನ್ನು ನೇಮಕ ಮಾಡುವಂತಿಲ್ಲ.







ಎಂಎಲ್‌ಸಿಗಳಿಗೆ ಮಂತ್ರಿ ಮಾಡಬಾರದು ಅಂತಾ ಎಲ್ಲೂ ಇಲ್ಲ, ಬಹಳ ದಿನಗಳ ನಂತರ ಮೊನ್ನೆ ಎಲ್ಲರೂ ಸೇರಿದ್ದೆವು. ಹಿರಿಯರು ಕರೆದಾಗ ತಿರಸ್ಕಾರ ಮಾಡಬಾರದು ಅಂತಾ ಹೋಗಿ ಊಟ ಮಾಡಿ ಬಂದಿದ್ದೇವೆ. ರಾಜ್ಯದಲ್ಲಿ ಬಿಜೆಪಿ ಸರಕಾರ ಬರಲು ಕಾರಣರಾದವರಿಗೆ ಮಂತ್ರಿ ಸ್ಥಾನ ಕೊಡಬೇಡಿ ಅಂತಾ ಯಾರು ಹೇಳುತ್ತಿಲ್ಲ.

-ಆರ್. ಶಂಕರ್ ಎಂಎಲ್‌ಸಿ

ಯಾವುದೇ ಪಕ್ಷಕ್ಕೆ ಸೇರಿದ ವಿಧಾನಸಭೆ ಅಥವಾ ವಿಧಾನ ಪರಿಷತ್ ಸದಸ್ಯ ಶಾಸಕ ಸ್ಥಾನದಿಂದ ಅನರ್ಹಗೊಂಡರೆ, ಮರು ಆಯ್ಕೆಯಾಗುವರೆಗೆ ಅವರನ್ನು ಸಚಿವ ಸ್ಥಾನಕ್ಕೆ ಪರಿಗಣಿಸಬಾರದು ಎಂದು ಸಂವಿಧಾನದ ಪರಿಚ್ಛೇದ 164(1ಬಿ) ಹಾಗೂ 361(ಬಿ) ಹೇಳುತ್ತದೆ. ವಿಶ್ವನಾಥ್ ವಿಧಾನಸಭೆಗಾಗಲೀ, ಪರಿಷತ್ತಿಗಾಗಲೀ ಆಯ್ಕೆಯಾಗಿಲ್ಲ. ಬದಲಾಗಿ ವಿಧಾನ ಪರಿಷತ್‌ಗೆ ಸಾಹಿತ್ಯ ಕೋಟಾದಡಿ ನಾಮನಿರ್ದೇಶನಗೊಂಡಿದ್ದಾರೆ. ಇದರಿಂದ, ಸಚಿವ ಸ್ಥಾನ ಪಡೆಯಲು ಅವರು ಅನರ್ಹರಾಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ ಎಂದು ಆದೇಶದಲ್ಲಿ ನ್ಯಾಯಪೀಠ ಹೇಳಿದೆ.

ಇದೇ ವೇಳೆ ಅರ್ಜಿದಾರರ ಪರ ವಕೀಲರೊಬ್ಬರು, "ಎಚ್. ವಿಶ್ವನಾಥ್‌ಗೆ ಅಧಿವೇಶನದಲ್ಲಿ ಭಾಗವಹಿಸದಂತೆ ನಿರ್ಬಂಧಿಸಬೇಕು" ಎಂದು ಕೋರಿದರು. ಆ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಲಿಲ್ಲ.